**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಎಸ್. ಎಲ್. ಬೋಜೇಗೌಡ ಹಾಗೂ ಶ್ರೀ ಮರಿತಿಬ್ಬೇಗೌಡ ಇವರ ನಿಯಮ 72 ಮೇರೆಗೆ ಗಮನಸೆಳೆಯುವ ಸೂಚನೆಗೆ ಉತ್ತರ.**

**ಪ್ರಶ್ನೆ**

ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ, ಅನುದಾನಿತ ಪದವಿ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ 6 ಮತ್ತು 7ನೇ ವೇತನ ಸಮಿತಿಯ ಶಿಫಾರಸ್ಸಿನನ್ವಯ ಸಿ.ಎ.ಎಸ್ ಅಡಿಯಲ್ಲಿ ಸಹ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರ ಹುದ್ದೆಗೆ ಹಾಗೂ ಸ್ಥಾನೀಕರಣ ಬಡ್ತಿಯನ್ನು ನೀಡುವಲ್ಲಿ ವಿಳಂಬ ಉಂಟಾಗಿದೆ ಮತ್ತು ಭವಿಷ್ಯವರ್ತಿಯಾಗಿ (Prospective) ಬಡ್ತಿಯನ್ನು ನೀಡುತ್ತಿರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

**ಉತ್ತರ**

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು/ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗೆ ಯುಜಿಸಿ ಮಾರ್ಗಸೂಚಿಗಳನ್ವಯ ನಿಯಮಾನುಸಾರ ಅರ್ಹರಿರುವ ಪ್ರಕರಣಗಳಲ್ಲಿ ಕಾಲಾನುಕಾಲಕ್ಕೆ ನಿಯಮಿತವಾಗಿ ಸ್ಥಾನೀಕರಣ ಸೌಲಭ್ಯವನ್ನು ಮಂಜೂರು ಮಾಡಲಾಗುತ್ತಿದೆ.

ಕಳೆದ 2020-21 ರಿಂದ ಪ್ರಸ್ತುತ ದಿನಾಂಕದವರೆವಿಗೂ ಮಂಜೂರು ಮಾಡಲಾಗಿರುವ ವಿವಿಧ ಶೈಕ್ಷಣಿಕ ಹಂತದ ಸ್ಥಾನೀಕರಣ ವಿವರ ಈ ಕೆಳಕಂಡಂತಿದೆ.

**ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು**

| ಕ್ರ.ಸಂ. | ಪದನಾಮ | 2020-21 ರಿಂದ ಇಲ್ಲಿಯವರೆಗೂ ಮಂಜೂರು ಮಾಡಿರುವ ವಿವಿಧ ಶೈಕ್ಷಣಿಕ ಹಂತದ ಸ್ಥಾನೀಕರಣ ವಿವರಗಳು | | | | ಒಟ್ಟು |
|---|---|---|---|---|---|---|
| | | ಶೈಕ್ಷಣಿಕ ಹಂತ 11ಎ | ಶೈಕ್ಷಣಿಕ ಹಂತ 12 | ಶೈಕ್ಷಣಿಕ ಹಂತ 13ಎ | ಶೈಕ್ಷಣಿಕ ಹಂತ 14 | |
| 1 | ಸಹ/ ಸಹಾಯಕ ಪ್ರಾಧ್ಯಾಪಕರು | 250 | 1983 | 618 | 274 | 3125 |
| 2 | ದೈಹಿಕ ಶಿಕ್ಷಣ ನಿರ್ದೇಶಕರು | 15 | 493 | 39 | 0 | 547 |
| 3 | ಗ್ರಂಥಪಾಲಕರು | 10 | 466 | 67 | 0 | 543 |
| | ಒಟ್ಟು | 275 | 2942 | 724 | 274 | 4215 |

**ಖಾಸಗಿ ಅನುದಾನಿತ ಪದವಿ ಕಾಲೇಜುಗಳು**

| ಕ್ರ. ಸಂ. | ಪದನಾಮ | 2020-21 ರಿಂದ ಇಲ್ಲಿಯವರೆಗೂ ಮಂಜೂರು ಮಾಡಿರುವ ವಿವಿಧ ಶೈಕ್ಷಣಿಕ ಹಂತದ ಸ್ಥಾನೀಕರಣ ವಿವರಗಳು | | | | ಒಟ್ಟು |
|---|---|---|---|---|---|---|
| | | ಶೈಕ್ಷಣಿಕ ಹಂತ 11 | ಶೈಕ್ಷಣಿಕ ಹಂತ 12 | ಶೈಕ್ಷಣಿಕ ಹಂತ 13ಎ | ಶೈಕ್ಷಣಿಕ ಹಂತ 14 | |
| 1 | ಸಹ/ ಸಹಾಯಕ ಪ್ರಾಧ್ಯಾಪಕರು | 279 | 466 | 212 | 2 | 959 |
| 2 | ದೈಹಿಕ ಶಿಕ್ಷಣ ನಿರ್ದೇಶಕರು | 59 | 85 | 6 | 0 | 150 |
| 3 | ಗ್ರಂಥಪಾಲಕರು | 35 | 45 | 6 | 0 | 86 |
| | ಒಟ್ಟು | 373 | 596 | 224 | 2 | 1195 |

- ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರುಗಳಿಗೆ ಸ್ಥಾನೀಕರಣ ಸೌಲಭ್ಯವನ್ನು ಸದರಿಯವರು ಸ್ಥಾನೀಕರಣಕ್ಕೆ ಅರ್ಹತೆ ಪಡೆದ ದಿನಾಂಕವನ್ನು ಕಾಲ್ಪನಿಕವಾಗಿ ಪರಿಗಣಿಸಿ ಆದೇಶ ಹೊರಡಿಸಿದ ದಿನಾಂಕದಿಂದ ಆರ್ಥಿಕ ಸೌಲಭ್ಯಗಳನ್ನು ಭವಿಷ್ಯವರ್ತಿಯಾಗಿ ಮಂಜೂರು ಮಾಡಲು ನಿಯಮಾನುಸಾರ ಕ್ರಮವಹಿಸಲಾಗಿದೆ. ಸದರಿ ಬೋಧಕರಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ.

**ಸಂಖ್ಯೆ: ಇಡಿ 295 ಡಿಸಿಇ 2023 (ಇ)**

**(ಡಾ: ಎಂ. ಸಿ. ಸುಧಾಕರ್)**
**ಉನ್ನತ ಶಿಕ್ಷಣ ಸಚಿವರು**